**ಕರ್ನಾಟಕ ಸರ್ಕಾರ**

**ವಾಣಿಜ್ಯ ತೆರಿಗೆ ಇಲಾಖೆ**

**ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಮೌ.ತೆ.ವಿ., ದಾವಣಗೆರೆ ವಿಭಾಗ, ದಾವಣಗೆರೆ, ದೇವರಾಜ್ ಅರಸ್ ಬಡಾವಣೆ, 'ಎ' ಬ್ಲಾಕ್, ದಾವಣಗೆರೆ.**

ಸಂಖ್ಯೆ: ವಾ.ತೆ.ಜಂ.ಆ/ಡಿ.ವಿ.ಓ/ದಾ/ಸೆ ಮತ್ತು ವಾ/2013-14, ದಿನಾಂಕ: 14.05.2013.

# ಟೆಂಡರ್ ನೋಟಿಫಿಕೇಶನ್

ಟೆಂಡರ್‌ಗಳನ್ನು ಎರಡು ಲಕೋಟೆಯಲ್ಲಿ ಸಲ್ಲಿಸುವ ಪದ್ಧತಿಯಲ್ಲಿ ಕರೆಯಲಾಗಿದ್ದು, ಟೆಂಡರನ್ನು ವಾಣಿಜ್ಯ ತೆರಿಗೆ ಇಲಾಖೆಯ, ದಾವಣಗೆರೆ ವಿಭಾಗದ, ದಾವಣಗೆರೆ, ದೇವರಾಜ್ ಅರಸ್ ಬಡಾವಣೆ, 'ಎ' ಬ್ಲಾಕ್‌ನಲ್ಲಿರುವ **"ವಾಣಿಜ್ಯ ತೆರಿಗೆ ಭವನ"**ಕ್ಕೆ ಭದ್ರತಾ ಸಿಬ್ಬಂದಿಗಳು ಹಾಗೂ ವಾಹನ ಚಾಲಕರನ್ನು ಅಧೀಕೃತ ಏಜೆನ್ಸಿಗಳ ಮೂಲಕ ಭದ್ರತಾ ಸಿಬ್ಬಂದಿಗಳು ದಿನದ 24 ಗಂಟೆ ಕಾವಲು ಕಾಯಲು ಲೇಬರ್ ಕಾಯ್ದೆಯ ಪ್ರಕಾರ ಅರ್ಜಿಯನ್ನು 2013-14ನೇ ಸಾಲಿಗೆ 10 ತಿಂಗಳ ಅವಧಿಗಾಗಿ ಅಂದರೆ ದಿ: 01.06.2013 ರಿಂದ 31.03.2014ರ ಅವಧಿಗೆ ಈ ಕಛೇರಿಯ ಷರತ್ತು ಹಾಗೂ ನಿಬಂಧನೆಗಳಂತೆ ಸಲ್ಲಿಸುವುದು. ಸದರಿ ಟೆಂಡರ್ ಹಾಗೂ ಪ್ರಸ್ತಾವನೆ ಅರ್ಜಿ (Request for proposal (RFP) ಗಳನ್ನು website http//:ctax.kar.nic.in ನಿಂದ ಡೌನ್‌ಲೋಡ್ ಮಾಡಿಕೊಂಡು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಲೆಕ್ಕ ಶೀರ್ಷಿಕೆ 0040-00-102-0-06 ಕ್ಕೆ ಜಮಾ ಮಾಡಿದ ಚಲನ್‌ನೊಂದಿಗೆ ಟೆಂಡರ್ ಫಾರ್ಮಗಳನ್ನು, ಈ ಕಛೇರಿಗೆ ಸಲ್ಲಿಸಬಹುದು. ಅಲ್ಲದೇ ದಿ: 15.05.2013 ರಿಂದ 25.05.2013ರ ಸಂಜೆ 4.00 ಗಂಟೆಯವರೆಗೆ ಈ ಕಛೇರಿಯ ವೇಳೆಯಲ್ಲಿ ಟೆಂಡರ್ ಫಾರಂಗಳನ್ನು, ಟೆಂಡರ್ ಅರ್ಜಿ ಮೌಲ್ಯ ರೂ.100.00+14.5 ವ್ಯಾಟ್ ಅನ್ನು ಸೇರಿ ಒಟ್ಟು ರೂ.115.00 ಗಳನ್ನು ನೀಡಿ ಈ ಕಛೇರಿಯಿಂದಲೂ ಪಡೆಯಬಹುದು. ಸದರಿ ಮೊತ್ತವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಭದ್ರತಾ ಸಿಬ್ಬಂದಿ ಹಾಗೂ ವಾಹನ ಚಾಲಕರನ್ನು ಪೂರೈಸುವ ಏಜೆನ್ಸಿಗಳು ಟೆಂಡರ್‌ನಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಪೂರೈಸಬೇಕು.

**ಮೊದಲನೇಯ ಲಕೋಟೆ ಟೆಕ್ನಿಕಲ್/ಅರ್ಹತಾಪೂರ್ವ ಬಿಡ್‌ಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ಹೊಂದಿರ ತಕ್ಕದ್ದು.**

1. ಟೆಕ್ನಿಕಲ್ / ಅರ್ಹತಾ ಪೂರ್ವ ಬಿಡ್‌ನಲ್ಲಿ ನಿಗದಿತ ನಮೂನೆಯಲ್ಲಿ (ಆರ್.ಎಫ್.ಪಿ ಗೆ ಲಗತ್ತಿಸಿದ ಅನುಬಂಧ-1 ರಲ್ಲಿ ಕಾಣಿಸಿರುವಂತೆ) ಎಲ್ಲಾ ವಿವರಗಳನ್ನು ನಮೂದಿಸಿರಬೇಕು.
2. ಭಾರತೀಯ ಆದಾಯ ತೆರಿಗೆ ಕಾಯ್ದೆ-1957 ರಂತೆ ಇಲಾಖೆಯವರು ನೀಡಿದ ಪಾನ್ ನಂಬರ್‌ನ ಮಾಹಿತಿಯನ್ನು ನೀಡಬೇಕು.

3. ಬಿಡ್ ಸಲ್ಲಿಸುವ ಏಜೆನ್ಸಿಗಳು ಕಳೆದ ಮೂರು ವರ್ಷಗಳಿಂದ ಕರ್ನಾಟಕ ರಾಜ್ಯದ ವಿವಿಧ ಇಲಾಖೆಗಳಲ್ಲಿ ಭದ್ರತಾ ಸಿಬ್ಬಂದಿ / ವಾಹನ ಚಾಲಕರನ್ನು ಗುತ್ತಿಗೆ ಆಧಾರದ ಮೇಲೆ ಪೂರೈಸುವ ಅನುಭವವನ್ನು ಹೊಂದಿರಬೇಕು. ಹಾಗೂ ಪ್ರಥಮವಾಗಿ ಮೊದಲನೇಯ ಲಕೋಟೆಯಾದ ಟೆಕ್ನಿಕಲ್ / ಅರ್ಹತಾ ಪೂರ್ವ ಬಿಡ್ ಲಕೋಟೆಯನ್ನು ಸೀಲು ಮಾಡಿ ಅದರ ಮೇಲೆ "ಭದ್ರತಾ ಸಿಬ್ಬಂದಿಗಳ / ವಾಹನ ಚಾಲಕರ ಪೂರೈಕೆಯ ಬಗ್ಗೆ ಟೆಂಡರ್" (ಟೆಕ್ನಿಕಲ್ ಬಿಡ್) ಎಂದು ದಪ್ಪ ಅಕ್ಷರಗಳಲ್ಲಿ ಬರೆದಿರಬೇಕು.

## ಎರಡನೇಯ ಲಕೋಟೆ – ಫೈನಾನ್ಸಿಯಲ್ ಬಿಡ್‌ಗೆ ಸಂಬಂಧಿಸಿರತಕ್ಕದ್ದು:

1. ಫೈನಾನ್ಸಿಯಲ್ ಬಿಡ್‌ಗೆ ಸಂಬಂಧಿಸಿದ ಮಾಹಿತಿಯನ್ನು ನಿಗದಿತ (ನಮೂನೆಯಲ್ಲಿ ಆರ್.ಇ.ಪಿ ಗೆ ಲಗತ್ತಿಸಿದ ಅನುಬಂಧ-2ರಲ್ಲಿ ಕಾಣಿಸಿರುವಂತೆ) ಎಲ್ಲಾ ವಿವರಗಳನ್ನು ನಮೂದಿಸಿರಬೇಕು ಹಾಗೂ ಸದರಿ ಲಕೋಟೆಯನ್ನು ಸೀಲು ಮಾಡಿ ಅದರ ಮೇಲೆ "ಭದ್ರತಾ ಸಿಬ್ಬಂದಿ / ವಾಹನ ಚಾಲಕರ ಪೂರೈಕೆಯ ಬಗ್ಗೆ ಟೆಂಡರ್ (ಫೈನಾನ್ಸಿಯಲ್ ಬಿಡ್)" ಎಂದು ದಪ್ಪ ಅಕ್ಷರಗಳಲ್ಲಿ ಬರೆದಿರಬೇಕು.

2. ಟೆಕ್ನಿಕಲ್ /ಅರ್ಹತಾ ಪೂರ್ವ ಬಿಡ್‌ನ ಲಕೋಟೆ ಹಾಗೂ ಫೈನಾನ್ಸಿಯಲ್ ಬಿಡ್‌ಗೆ ಸಂಬಂಧಿಸಿದ ಲಕೋಟೆ. ಈ ಎರಡು ಲಕೋಟೆಗಳನ್ನು "**ದೊಡ್ಡದಾದ ಲಕೋಟೆಯಲ್ಲಿ**" ಹಾಕಿ ಸೀಲು ಮಾಡಿ ಅದರ ಮೇಲೆ "ಭದ್ರತಾ ಸಿಬ್ಬಂದಿಗಳ / ವಾಹನ ಚಾಲಕರ ಪೂರೈಕೆಯ ಬಗ್ಗೆ ಟೆಂಡರ್" ಎಂದು ದಪ್ಪ ಅಕ್ಷರಗಳಲ್ಲಿ ಬರೆದಿರಬೇಕು ಹಾಗೂ ಈ ಲಕೋಟೆಯು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ದಾವಣಗೆರೆ ಇವರ ಹೆಸರಿನಲ್ಲಿರಬೇಕು ಹಾಗೂ ಮೇಲ್ಕಾಣಿಸಿದ ಟೆಂಡರ್‌ಗಳು ಯಾವುದೇ ಕರಾರು ಅಥವಾ ಷರತ್ತಿಗೆ ಒಳಪಟ್ಟಿರಬಾರದು. ಒಂದು ವೇಳೆ ಯಾವುದೇ ಕರಾರು ಅಥವಾ ಷರತ್ತುಗಳು ವಿಧಿಸಿದ್ದು ಕಂಡು ಬಂದಲ್ಲಿ ಅವುಗಳನ್ನು ತಿರಸ್ಕರಿಸಲಾಗುವುದು ಹಾಗೂ ಟೆಕ್ನಿಕಲ್ / ಅರ್ಹತಾ ಪೂರ್ವ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರ್‌ದಾರರ ಫೈನಾನ್ಸಿಯಲ್ ಬಿಡ್‌ಗಳನ್ನು ಮಾತ್ರ ಪರಿಗಣಿಸಲಾಗುವುದು.

3. ಭರ್ತಿ ಮಾಡಿದ ಟೆಂಡರಿನ ಎರಡು ಲಕೋಟೆಗಳನ್ನು / ಅರ್ಜಿಗಳನ್ನು ದಿನಾಂಕ: 25.05.2013ರ ಸಾಯಂಕಾಲ 4.00 ಗಂಟೆಯೊಳಗಾಗಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ದಾವಣಗೆರೆ ವಿಭಾಗ, ದೇವರಾಜ್ ಅರಸ್ ಬಡಾವಣೆ, 'ಎ' ಬ್ಲಾಕ್, ದಾವಣಗೆರೆ ಇವರ ಕಛೇರಿಗೆ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಯಾವುದೇ ಟೆಂಡರ್ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

4. ಟೆಕ್ನಿಕಲ್ / ಅರ್ಹತಾ ಪೂರ್ವ ಬಿಡ್‌ನ ಲಕೋಟೆಗಳನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ದಾವಣಗೆರೆ ವಿಭಾಗ, ದೇವರಾಜ್ ಅರಸ್ ಬಡಾವಣೆ, 'ಎ' ಬ್ಲಾಕ್, ದಾವಣಗೆರೆ ಇವರ ಕಛೇರಿಯಲ್ಲಿ ದಿನಾಂಕ: 29.05.2013 ರಂದು ಬೆಳಿಗ್ಗೆ 11.00 ಗಂಟೆಗೆ ಹಾಜರಿದ್ದ ಬಿಡ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು ಹಾಗೂ ಅರ್ಹತಾ ಪೂರ್ವ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರ್‌ದಾರರ ಫೈನಾನ್ಸಿಯಲ್ ಬಿಡ್‌ಗಳನ್ನು ಪ್ರಸ್ತಾವನಾ ವಿನಂತಿಯ ಪ್ಯಾರಾ-7.3 ರಲ್ಲಿ ಸೂಚಿಸಿದಂತೆ ಕ್ರಮ ಕೈಗೊಳ್ಳಲಾಗುವುದು. ಈ ಕುರಿತಂತೆ ಯಾವುದೇ ಬಿಡ್‌ದಾರರಿಗೆ ವೈಯಕ್ತಿಕವಾಗಿ ಲಿಖಿತವಾದ ಸೂಚನೆಯನ್ನು ನೀಡಲಾಗುವುದಿಲ್ಲ.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
(ಆಡಳಿತ), ಮೌ.ತೆ.ವಿ., ದಾವಣಗೆರೆ.

# ಕರ್ನಾಟಕ ಸರ್ಕಾರ

# ವಾಣಿಜ್ಯ ತೆರಿಗೆ ಇಲಾಖೆ (CTD)

# ದಾವಣಗೆರೆ

## ಪ್ರಸ್ತಾವನಾ ವಿನಂತಿ (Request for proposal)

ವಾಣಿಜ್ಯ ತೆರಿಗೆ ಇಲಾಖೆಯ, "ವಾಣಿಜ್ಯ ತೆರಿಗೆ ಭವನ"

ದೇವರಾಜ್ ಅರಸ್ ಬಡಾವಣೆ, 'ಎ' ಬ್ಲಾಕ್, ದಾವಣಗೆರೆ

ಕಟ್ಟಡಕ್ಕೆ ಭದ್ರತಾ ಸಿಬ್ಬಂದಿ / ವಾಹನ ಚಾಲಕರನ್ನು ಪೂರೈಸುವ ಕುರಿತು.

## ಪ್ರಸ್ತಾವನೆ ವಿಳಾಸವನ್ನು ಸಲ್ಲಿಸಬೇಕಾದ ವಿಳಾಸ:

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು

(ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ,

ದಾವಣಗೆರೆ, ದೇವರಾಜ್ ಅರಸ್ ಬಡಾವಣೆ,

'ಎ' ಬ್ಲಾಕ್, ದಾವಣಗೆರೆ – 577006.

ದೂರವಾಣಿ ಸಂಖ್ಯೆ: **08192-231359**

website: http://ctax.kar.nic.in

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
(ಆಡಳಿತ), ಮೌ.ತೆ.ವಿ., ದಾವಣಗೆರೆ.

# ಪರಿವಿಡಿ


| ಕ್ರ. ಸಂ. | ವಿವರಗಳು | ಪುಟಗಳು | |
|---|---|---|---|
| | | ಇಂದ | ವರೆಗೆ |
| 1 | ಭದ್ರತಾ ಸಿಬ್ಬಂದಿ / ವಾಹನ ಚಾಲಕರ ಪೂರೈಕೆ | 01 | 01 |
| 2 | ವಿದ್ಯಾರ್ಹತೆ ಮತ್ತು ಅನುಭವ | 01 | 01 |
| 3 | ಭದ್ರತಾ ಸಿಬ್ಬಂದಿ / ವಾಹನ ಚಾಲಕರ ಕಾರ್ಯ ಚಟುವಟಿಕೆ ಹಾಗೂ ಜವಾಬ್ದಾರಿ. | 01 | 02 |
| 4 | ವಾಹನ ಚಾಲಕರ ಸೇವೆಯ ಕರ್ತವ್ಯ ಮತ್ತು ಷರತ್ತುಗಳು | 02 | 03 |
| 5 | ಭದ್ರತಾ ಸಿಬ್ಬಂದಿ / ವಾಹನ ಚಾಲಕರನ್ನು ಪೂರೈಸುವ ಏಜೆನ್ಸಿಯ ಅರ್ಹತೆಯ ಬಗ್ಗೆ. | 03 | 03 |
| 6 | ಬಿಡ್‌ಗಳ ಸಲ್ಲಿಕೆ. | 04 | 05 |
| 7 | ಬಿಡ್‌ಗಳ ತೆರೆಯುವ ಪ್ರಕ್ರಿಯೆ | 05 | 06 |
| 8 | ಬಿಡ್‌ಗಳಲ್ಲಿಯ ಸಹಿ ಕುರಿತು. | 06 | 06 |
| 9 | ಪ್ರಸ್ತಾವನೆಯಲ್ಲಿ ಕರಾರುಗಳ ಷರತ್ತುಗಳನ್ನು ತಿದ್ದುಪಡೆ/ರದ್ದು ಪಡಿಸುವ ಕುರಿತು. | 06 | 06 |
| 10 | ಯಶಸ್ವಿ ಬಿಡ್ಡುದಾರನ ಇತರೆ ವಿಶೇಷ ಬಾದ್ಯಸ್ಥಿಕೆಗಳು | 06 | 07 |
| 11 | ಬೆಲೆಗಳು ಮತ್ತು ತೆರಿಗೆಗಳು | 07 | 08 |
| 12 | ಬಿಡ್ಡುಗಳ ಅವಧಿ | 08 | 08 |
| 13 | ಎಲ್–1 ಬಿಡ್ಡುದಾರರನ್ನು ಗುರುತಿಸಿ ಒಪ್ಪಂದವನ್ನು ಮಾಡಿಕೊಳ್ಳುವ ಕುರಿತು. | 08 | 08 |
| 14 | ಇಲಾಖೆಯು ಬಿಡ್ಡನ್ನು ಅಂಗೀಕರಿಸುವ/ತಿರಸ್ಕರಿಸುವ ಅಧಿಕಾರದ ಕುರಿತು. | 09 | 09 |
| 15 | ಒಪ್ಪಂದ ಕರಾರು ಪತ್ರ ಮಾಡಿಕೊಳ್ಳುವ ಕುರಿತು. | 09 | 09 |
| 16 | ಕಾರ್ಯನಿರ್ವಹಣೆ | 09 | 09 |
| 17 | ಒಪ್ಪಂದಗಳನ್ನು ಮುರಿದುಕೊಳ್ಳುವುದು. | 09 | 09 |
| 18 | ಗುತ್ತಿಗೆ ಮೊತ್ತವನ್ನು ಪಾವತಿ ಮಾಡುವ ಕರಾರುಗಳು | 10 | 10 |
| 19 | ವ್ಯಾಜ್ಯಗಳ ಪರಿಹಾರ ಕುರಿತು. | 10 | 11 |


ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
(ಆಡಳಿತ), ಮೌ.ತೆ.ವಿ., ದಾವಣಗೆರೆ.

**1. ಭದ್ರತಾ ಸಿಬ್ಬಂದಿ ಪೂರೈಕೆ:**

1.1 ಭದ್ರತಾ ಏಜೇನ್ಸಿಗಳು ಪೂರೈಸಿದ ಭದ್ರತಾ ಸಿಬ್ಬಂದಿಗಳು ಭದ್ರತೆ ಕಾಪಾಡುವಲ್ಲಿ ಪರಿಣಿತಿ ಹೊಂದಿದ ಸದೃಢ ಹಾಗೂ ಆರೋಗ್ಯವಂತ ಸಿಬ್ಬಂದಿಗಳು ದಿನದ 24 ಗಂಟೆಗಳ ಅವಧಿಗೆ 3 ಶಿಫ್ಟಗಳಲ್ಲಿ ವಾಣಿಜ್ಯ ತೆರಿಗೆ ಭವನ ಕಟ್ಟಡ, ದಾವಣಗೆರೆ ಇಲ್ಲಿ ಕಾರ್ಯ ನಿರ್ವಹಿಸಲು ಸಿದ್ದರಿರಬೇಕು.

1.2 ಭದ್ರತಾ ಸಿಬ್ಬಂದಿ ಆರೋಗ್ಯವಂತರಾಗಿದ್ದು 50 ವರ್ಷಗಳ ವಯೋಮಿತಿಯೊಳಗಿರಬೇಕು.

**2. ವಿದ್ಯಾರ್ಹತೆ ಮತ್ತು ಅನುಭವ:**

2.1 ಭದ್ರತಾ ಏಜೇನ್ಸಿಗಳು ಪೂರೈಸಿದ ಭದ್ರತಾ ಸಿಬ್ಬಂದಿಗಳು ಕನಿಷ್ಟ ಓದುವ ಮತ್ತು ಬರೆಯುವ ಜ್ಞಾನ ಹೊಂದಿರಬೇಕು. ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು ಇವರು ಕಾಲ ಕಾಲಕ್ಕೆ ನೀಡುವ ನಿರ್ದೇಶನಗಳನ್ವಯ ಕಾರ್ಯನಿರ್ವಹಿಸಬೇಕು. ಎಲ್ಲಾ ಭದ್ರತಾ ಸಿಬ್ಬಂದಿಗಳು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ದಾವಣಗೆರೆ ಇವರ ನೇರ ಸುಪರ್ದಿಗೆ ಒಳಪಟ್ಟಿರುತ್ತಾರೆ.

3. **ಭದ್ರತಾ ಸಿಬ್ಬಂದಿಗಳ ಕಾರ್ಯ ಚಟುವಟಿಕೆಯ ಹಾಗೂ ಜವಾಬ್ದಾರಿಯ ಬಗ್ಗೆ ಷರತ್ತುಗಳು:** ಭದ್ರತಾ ಸಿಬ್ಬಂದಿಗಳು ಇಲಾಖಾ ಕಟ್ಟಡದ ವ್ಯಾಪ್ತಿಯಲ್ಲಿ ಬರುವ ಇಲಾಖಾ ಕಟ್ಟದ ಇಲಾಖಾ ವಾಹನಗಳನ್ನು ಕಾವಲು ಕಾಯುವುದು ಹಾಗೂ ವಾಹನ ನಿಲುಗಡೆ ಸ್ಥಳಗಳಲ್ಲಿ ಕಛೇರಿ ಸಿಬ್ಬಂದಿ / ಅಧಿಕಾರಿಗಳು ನಿಲ್ಲಿಸಿದ ವಾಹನಗಳನ್ನು ಸಹ ಕಾಯುವುದು ಹಾಗೂ ಸಂರಕ್ಷಿಸುವುದು.

3.1 ಭದ್ರತಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವ ಸಮಯದಲ್ಲಿ ಕಛೇರಿ ಆವರಣದೊಳಗೆ ಬಂದು ಹೋಗುವ ಸಂದರ್ಶಕರ ಹಾಗೂ ಸಾರ್ವಜನಿಕರ ಬಗ್ಗೆ ತೀವ್ರವಾಗಿ ನಿಗಾವಹಿಸುವುದು. ಹಾಗೂ ಯಾವುದೇ ರೀತಿಯಲ್ಲಿ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ / ಅಧಿಕಾರಿಗಳಿಗೆ ಯಾವುದೇ ರೀತಿಯಲ್ಲಿ ಸಾರ್ವಜನಿಕರಿಂದ ತೊಂದರೆಯಾಗದಂತೆ ಮತ್ತು ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳುವುದು.

3.2 ನಿಯೋಜಿತ ಭದ್ರತಾ ಸಿಬ್ಬಂದಿಯವರಿಗೆ ಯಾವುದೇ ತರಹದ ಊಟ, ಉಪಚಾರ, ವಸತಿ ಸೌಲಭ್ಯಗಳಿರುವುದಿಲ್ಲ. ಪ್ರತಿ ನಿತ್ಯ ಸಮವಸ್ತ್ರ ಹಾಗೂ ಫೋಟೊ ಗುರುತಿನ ಚೀಟಿಯನ್ನು ಧರಿಸಿ ಕರ್ತವ್ಯಕ್ಕೆ ಹಾಜರಾಗುವುದು. ಸಮವಸ್ತ್ರ ಹಾಗೂ ಕಾವಲಿಗೆ ಬೇಕಾಗದ ಇತರೆ ಸಾಮಗ್ರಿಗಳನ್ನು (ಉದಾ: ಲಾಠಿ, ಟಾರ್ಚ್, ಇತ್ಯಾದಿ) ಭದ್ರತಾ ಸಿಬ್ಬಂದಿ ಏಜೆನ್ಸಿಯವರು ಕಡ್ಡಾಯವಾಗಿ ಒದಗಿಸತಕದು.

3.3 ಭದ್ರತಾ ಸಿಬ್ಬಂದಿಗಳು ಕಾರ್ಯನಿರ್ವಹಿಸುವ ಸಮಯದಲ್ಲಿ ಕಛೇರಿ ಆವರಣದೊಳಗೆ ಬಂದು-ಹೋಗುವ ಸಂದರ್ಶಕರ ಹಾಗೂ ಸಾರ್ವಜನಿಕರ ಹೆಸರುಗಳನ್ನು ಚಲನವಲನ ವಹಿಯಲ್ಲಿ ದಾಖಲಿಸಿ ಅವರಿಂದ ರುಜು ಪಡೆಯುವುದು.

3.4 ಭದ್ರತಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವ ಸಮಯದಲ್ಲಿ ಇಲಾಖಾ ಕಛೇರಿ ಆವರಣದೊಳಗೆ ಯಾವುದೇ ಕಳುವು ಅಥವಾ ಇಲಾಖೆಯ ಕಛೇರಿಯ ಕಟ್ಟಡಕ್ಕೆ ಅಥವಾ ಇಲಾಖೆಯ ಯಾವುದೇ ವಾಹನಗಳಿಗೆ ಹಾಗೂ ಇಲಾಖೆಯ ನೌಕರರ ವಾಹನಗಳಿಗೆ ಕರ್ತವ್ಯದ ನಿರ್ಲಕ್ಷತೆಯಿಂದ ಹಾನಿಯಾದಲ್ಲಿ ಸದರಿ ಹಾನಿಯನ್ನು ಭದ್ರತಾ ಏಜೆನ್ಸಿಗಳೇ ಇಲಾಖೆಗೆ ಭರಿಸಿ ಕೊಡತಕ್ಕದ್ದು.

3.5 ಭದ್ರತಾ ಸೇವೆಯ ತೃಪ್ತಿಕರವಾಗಿಲ್ಲದಿದ್ದರೆ 15 ದಿನಗಳ ಮುಂಚಿತವಾಗಿ ನೋಟಿಸ್ ನೀಡಿ ಸೇವೆಯನ್ನು ವಜಾ ಮಾಡುವ ಹಕ್ಕನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ದಾವಣಗೆರೆ ಇವರು ಹೊಂದಿರುತ್ತಾರೆ.

**4. ವಾಹನ ಚಾಲಕರ ಸೇವೆಯ ಷರತ್ತುಗಳು:**

4.1 ವಾಹನ ಚಾಲಕರು ಮೋಟಾರು ವಾಹನ ಕಾಯ್ದೆ ಪ್ರಕಾರ ಲಘು ಮೋಟಾರು ವಾಹನ ಹಾಗೂ ಚಾಲನ ಪ್ರಮಾಣ ಪತ್ರ ಮತ್ತು ಬ್ಯಾಡ್ಜ್ ಅನ್ನು ಹೊಂದಿರಬೇಕು.

4.2 ಬಾಡಿಗೆ ಆಧಾರದ ಮೇಲೆ ನಿಯೋಜಿತರಾದ ವಾಹನ ಚಾಲಕರಿಗೆ ಯಾವುದೇ ಊಟ, ವಸತಿ, ಉಪಹಾರದ ಸೌಲಭ್ಯಗಳು ಇರುವುದಿಲ್ಲ ಹಾಗೂ ವಾಹನ ಚಾಲಕರ ಸಮವಸ್ತ್ರವನ್ನು ಸೇವೆ ಒದಗಿಸುವ ಸಂಸ್ಥೆಯೇ ಒದಗಿಸತಕ್ಕದ್ದು.

4.3 ಬಾಡಿಗೆ ಆಧಾರದ ಮೇಲೆ ನಿಯೋಜಿತರಾದ ವಾಹನ ಚಾಲಕರ ಸೇವೆಯು ತೃಪ್ತಿಕರವಾಗಿಲ್ಲವೆಂದು ಕಂಡು ಬಂದಲ್ಲಿ ಅಥವಾ ಇನ್ನಾವುದೇ ಕಾರಣಗಳಿಗಾಗಿ, ಯಾವುದೇ ಕಾರಣ ನೀಡದೆ ವಾಹನ ಚಾಲಕರನ್ನು ತೆಗೆದು ಹಾಕುವ (ವಜಾ) ಮಾಡುವ ಹಕ್ಕನ್ನು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ದಾವಣಗೆರೆ ಇವರು ಹೊಂದಿರುತ್ತಾರೆ.

4.4 ಬಾಡಿಗೆ ಆಧಾರದ ಮೇಲೆ ನಿಯೋಜಿತರಾದ ಚಾಲಕರು ಇಲಾಖೆಯ ಅಧಿಕಾರಿಗಳ ನಿರ್ದೇಶನದಂತೆ ಕರ್ತವ್ಯವನ್ನು ನಿರ್ವಹಿಸಬೇಕು. ಕಾರ್ಯನಿರ್ವಹಣೆಯಲ್ಲಿ ಪ್ರತಿ ದಿನ ಚಾಲಕರು ಸಮಯಕ್ಕೆ ಸರಿಯಾಗಿ ಹಾಜರಾಗಬೇಕು. ಹೆಚ್ಚುವರಿಯಾಗಿ ಕೆಲಸ ನಿರ್ವಹಣೆಗಾಗಿ ಯಾವುದೇ ತರಹದ ವಿಶೇಷ ಭತ್ಯೆಗಳನ್ನು ನೀಡಲಾಗುವುದಿಲ್ಲ.

**5. ಭದ್ರತಾ ಸಿಬ್ಬಂದಿ / ವಾಹನ ಚಾಲಕರನ್ನು ಪೂರೈಸುವ ಏಜೆನ್ಸಿಯ ಅರ್ಹತೆಯ ಬಗ್ಗೆ:**

5.1 ಭದ್ರತಾ ಸಿಬ್ಬಂದಿ / ವಾಹನ ಚಾಲಕರನ್ನು ಪೂರೈಸುವ ಏಜೆನ್ಸಿಗಳು ಕರ್ನಾಟಕದಲ್ಲಿಯೇ ತಮ್ಮ ಕೇಂದ್ರ ಸ್ಥಳವನ್ನು ಹೊಂದಿರಬೇಕು. ಹಾಗೂ ಭದ್ರತಾ ಸಿಬ್ಬಂದಿಗಳನ್ನು ಪೂರೈಸುವಲ್ಲಿ ಕನಿಷ್ಠ 03 ವರ್ಷ ಅನುಭವ ಹೊಂದಿರಬೇಕು, ಅಲ್ಲದೇ ರಾಜ್ಯ ಸರ್ಕಾರ / ಕೇಂದ್ರ ಸರ್ಕಾರ / ಸರ್ಕಾರದಿಂದ ಅಂಗೀಕೃತ ಸಂಸ್ಥೆಗಳಿಗೆ (ಕನಿಷ್ಟ 05 ಇಲಾಖೆಗಳಿಗೆ) ಭದ್ರತಾ ಸಿಬ್ಬಂದಿಗಳನ್ನು ಪೂರೈಸಿದ ಬಗ್ಗೆ ಅನುಭವ ಹೊಂದಿರಬೇಕು. ಹಾಗೂ ಸಧ್ಯಕ್ಕೆ ಭದ್ರತಾ ಸಿಬ್ಬಂದಿಗಳನ್ನು ಮತ್ತು ವಾಹನ ಚಾಲಕರನ್ನು ಪೂರೈಸಿದ ಬಗ್ಗೆ ಪ್ರಮಾಣ ಪತ್ರಗಳನ್ನು ಲಗತ್ತಿಸಬೇಕು.

5.2 ಭದ್ರತಾ ಸಿಬ್ಬಂದಿ / ವಾಹನ ಚಾಲಕರನ್ನು ಪೂರೈಸುವ ಏಜೆನ್ಸಿಗಳು ಕಾರ್ಮಿಕ ಕಾಯ್ದೆ ಅಡಿ, ಇ.ಎಸ್.ಐ, ಇ.ಪಿ.ಎಫ್, ಆದಾಯ ತೆರಿಗೆ ಹಾಗೂ ವೃತ್ತಿ ತೆರಿಗೆ ಕಾಯ್ದೆಗಳಡಿಯಲ್ಲಿ ನೋಂದಣಿಯನ್ನು ಹೊಂದಿರಬೇಕು ಅಲ್ಲದೇ ನೋಂದಣಿ ಹೊಂದಿದ ಬಗ್ಗೆ ದೃಢೀಕರಿಸಿದ ನೋಂದಣಿ ಪ್ರಮಾಣ ಪತ್ರಗಳನ್ನು ಲಗತ್ತಿಸಿರಬೇಕು.

5.3 ಭದ್ರತಾ ಸಿಬ್ಬಂದಿ / ವಾಹನ ಚಾಲಕರನ್ನು ಪೂರೈಸುವ ಏಜೆನ್ಸಿಗಳು ತಾವು ಪೂರೈಸುವ ಭದ್ರತಾ ಸಿಬ್ಬಂದಿಗಳಿಗೆ ವಾಹನ ಚಾಲಕರಿಗೆ ಕಾರ್ಮಿಕ ಕಾಯ್ದೆ ಅಡಿ ನಿಗದಿಪಡಿಸಿದಂತೆ ಕನಿಷ್ಟ ವೇತನ ಅಥವಾ ಅದಕ್ಕಿಂತಲೂ ಹೆಚ್ಚಿಗೆ ನೀಡಬೇಕು ಮತ್ತು ತಮ್ಮ ಪ್ರತಿ ಭದ್ರತಾ ಸಿಬ್ಬಂದಿ / ವಾಹನ ಚಾಲಕರಿಗೆ ಸಂಬಂಧಿಸಿದಂತೆ ಇ.ಎಸ್.ಐ / ಇ.ಪಿ.ಎಫ್ / ವೃತ್ತಿ ತೆರಿಗೆ ಹಾಗೂ ಇನ್ನಿತರೆ ಕಾಯ್ದೆಬದ್ಧವಾದ ವೆಚ್ಚಗಳನ್ನು ಪ್ರತಿ ತಿಂಗಳೂ ಪಾವತಿ ಮಾಡಿದ ಬಗ್ಗೆ ಚಲನ್ ಪ್ರತಿಗಳನ್ನು ದೃಢೀಕರಿಸಿ ಬಿಲ್ಲಿನೊಂದಿಗೆ ಕಡ್ಡಾಯವಾಗಿ ಲಗತ್ತಿಸಲು ಬದ್ಧರಿರಬೇಕು. ತಪ್ಪಿದಲ್ಲಿ ನಂತರದ ತಿಂಗಳುಗಳ ಬಿಲ್‌ನ್ನು ತಡೆಹಿಡಿಯಲಾಗುವುದು.

5.4 ಪ್ರತಿ ಭದ್ರತಾ ಸಿಬ್ಬಂದಿಯ ಹೆಸರಿಗೆ ಬ್ಯಾಂಕ್ ಖಾತೆ ಪ್ರಾರಂಭಿಸಿ ಅವರ ಖಾತೆಗೆ ವೇತನವನ್ನು ಜಮಾ ಮಾಡಬೇಕು.

**6. ಬಿಡ್ಡಗಳ ಸಲ್ಲಿಕೆ.**

6.1 ಸೆಕ್ಯೂರಿಟಿ ಡೆಫಾಸಿಟ್ (ಇ.ಎಂ.ಡಿ) 30,000.00 ರೂಗಳನ್ನು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಮೌ.ತೆ.ವಿ., ದಾವಣಗೆರೆ ಇವರ ಹೆಸರಿನಲ್ಲಿ ಡಿ.ಡಿ. ಮುಖಾಂತರ ಪಾವತಿಸುವುದು.

6.2 ಬಿಡ್ಡುದಾರರು ಟೆಕ್ನಿಕಲ್ / ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್‌ಗಳನ್ನು ಪ್ರಸ್ತಾವನಾ ವಿನಂತಿಯಲ್ಲಿ (Request for Proposal) ತಿಳಿಸಿರುವಂತೆ ತೃಪ್ತಿದಾಯಕವಾಗಿ ನಿಗದಿತ ಅನುಬಂಧ–1 ಮತ್ತು 2 ರಲ್ಲಿ ಕಾಣಿಸಿರುವಂತೆ ಎಲ್ಲಾ ಅಂಶಗಳನ್ನು ಭರಣಾ ಮಾಡಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ದಾವಣಗೆರೆ ವಿಭಾಗ, ದೇವರಾಜ್ ಅರಸ್ ಬಡಾವಣೆ, 'ಎ' ಬ್ಲಾಕ್, ದಾವಣಗೆರೆ ಇವರ ವಿಳಾಸಕ್ಕೆ ಸಲ್ಲಿಸುವುದು.

ಎ) ಹಾಗೂ ಮೊದಲನೇಯ ಲಕೋಟೆಯಾದ ಟೆಕ್ನಿಕಲ್ / ಅರ್ಹತಾ ಪೂರ್ವ ಬಿಡ್ ಲಕೋಟೆಯ ಮೇಲೆ ಭದ್ರತಾ ಸಿಬ್ಬಂದಿಗಳ / ವಾಹನ ಚಾಲಕರ ಪೂರೈಕೆಗೆ ಸಂಬಂಧಿಸಿದಂತೆ ಎಂದು ದಪ್ಪ ಅಕ್ಷರಗಳಲ್ಲಿ ಬರೆಯುವುದು ಹಾಗೂ ನಿಗದಿತ ಅನುಬಂಧ–1ನ್ನು ಭರ್ತಿಮಾಡಿ ಲಗತ್ತಿಸಿ ಸೀಲು ಮಾಡುವುದು.

ಬಿ) ಅದರಂತೆ ಎರಡನೇಯ ಲಕೋಟೆಯಾದ ಫೈನಾನ್ಸಿಯಲ್ ಬಿಡ್ ಲಕೋಟೆಯ ಮೇಲೆ ಭದ್ರತಾ ಸಿಬ್ಬಂದಿಗಳ / ವಾಹನ ಚಾಲಕರ ಪೂರೈಕೆಗಾಗಿ ಎಂದು ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ ಬರೆಯುವುದು ಹಾಗೂ ನಿಗದಿತ ಅನುಬಂಧ–2ನ್ನು ಭರ್ತಿಮಾಡಿ ಲಗತ್ತಿಸಿ ಸೀಲು ಮಾಡುವುದು.

6.3 ಭದ್ರತಾ / ವಾಹನ ಚಾಲಕರ ಏಜೆನ್ಸಿಗಳು ಟೆಕ್ನಿಕಲ್ / ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್ ಈ ಎರಡೂ ಬಿಡ್‌ಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು.

6.4 ಭದ್ರತಾ / ವಾಹನ ಚಾಲಕರ ಏಜೆನ್ಸಿಗಳು ಟೆಂಡರಿನ ಮಾದರಿ ನಮೂನೆಗಳನ್ನು (Request for Proposal) ಅಂತರಜಾಲ ಮೂಲಕ ಡೌನ್‌ಲೋಡ್ ಮಾಡಿಕೊಂಡು ಎಲ್ಲಾ ನಮೂನೆಗಳನ್ನು ಪಡೆದು ಸದರಿ ಟೆಂಡರಿನ ಮೊತ್ತ ರೂ.100.00 ಹಾಗೂ ತೆರಿಗೆ ಶೇಕಡ 14.5ರಂತೆ ಒಟ್ಟು ರೂ.115.00ಗಳನ್ನು ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಚಲನ್ ಮೂಲಕ ಭರ್ತಿ ಮಾಡಿ (ಲೆಕ್ಕ ಶೀರ್ಷಿಕೆ 0040-00-102-0-06) ಚಲನಿನ ಮೂಲ ಪ್ರತಿಯನ್ನು ಟೆಕ್ನಿಕಲ್ / ಅರ್ಹತಾ ಪೂರ್ವ ಬಿಡ್‌ನೊಂದಿಗೆ ಲಗತ್ತಿಸುವುದು. ಹಾಗೂ ಸದರಿ ಮೊತ್ತವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

6.5 ಸೀಲು ಮಾಡಿದ ಲಕೋಟೆಗಳಾದ ಟೆಕ್ನಿಕಲ್ / ಅರ್ಹತಾ ಪೂರ್ವ ಬಿಡ್ ಹಾಗೂ ಫೈನಾನ್ಸಿಯಲ್ ಬಿಡ್‌ಗಳನ್ನು ದೊಡ್ಡದಾದ ಇನ್ನೊಂದು ಲಕೋಟೆಯಲ್ಲಿ ಹಾಕಿ ಸೀಲು ಮಾಡಿ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ದಾವಣಗೆರೆ (ದೂರವಾಣಿ ಸಂಖ್ಯೆ: 08192-231359) ಇಲ್ಲಿಗೆ ದಿನಾಂಕ: 25.05.2013 ರಂದು ಸಂಜೆ 4.00 ಗಂಟೆಯೊಳಗಾಗಿ ಸಲ್ಲಿಸುವುದು. ಹಾಗೂ ಸದರಿ ಟೆಂಡರುಗಳನ್ನು ದಿನಾಂಕ: 29.05.2013 ರಂದು ಬೆಳಿಗ್ಗೆ 11.00 ಗಂಟೆಗೆ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರ ಕೊಠಡಿಯೊಳಗೆ ತೆರೆಯಲಾಗುವುದು.

6.6 ಯಾವುದೇ ಬಿಡ್‌ಗಳನ್ನು ನಿಗದಿ ಪಡಿಸಿದ ದಿನಾಂಕ ಹಾಗೂ ಸಮಯದೊಳಗೆ ಸ್ವೀಕರಿಸಿರದಿದ್ದರೆ ಅಂತಹ ಬಿಡ್ಡುಗಳನ್ನು ತಿರಸ್ಕರಿಸಲಾಗುವುದು. ಒಂದು ವೇಳೆ ಬಿಡ್ಡುಗಳನ್ನು ತೆರೆಯುವಂತಹ ದಿನಾಂಕವು ಸರ್ಕಾರಿ ರಜೆ ದಿನವಾದ ಪಕ್ಷದಲ್ಲಿ ಮರುದಿನವೇ ಅಂದರೆ ಕಛೇರಿಯ ಕಾರ್ಯನಿರ್ವಹಿಸುವ ದಿನದಂದು ಈ ಹಿಂದೆ ನಿಗದಿಪಡಿಸಿದ ಸಮಯಕ್ಕೆ ತೆರೆಯಲಾಗುವುದು.

6.7ಬಿಡ್ಡುಗಳನ್ನು ಸಲ್ಲಿಸುವುದಕ್ಕಾಗಿ ಬಿಡ್ಡುದಾರರು ವ್ಯಯಿಸಿದಂತಹ ವೆಚ್ಚಕ್ಕೆ ಈ ಇಲಾಖೆಯು(ಟೆಂಡರ್ ಕರೆದಂತಹ ಕಛೇರಿಯಾಗಲಿ ಅಥವಾ ಇಲಾಖೆಯಾಗಲಿ) ಯಾವುದೇ ರೀತಿಯಿಂದ ಜವಾಬ್ದಾರರಾಗುವುದಿಲ್ಲ.

**7 ಬಿಡ್ಡುಗಳ ತೆರೆಯುವ ಪ್ರಕ್ರಿಯೆ:**

7.1 ವಾಣಿಜ್ಯ ತೆರಿಗೆ ಇಲಾಖೆಯು ಎರಡು ಹಂತದಲ್ಲಿ ಬಿಡ್ ತೆರೆಯುವ ಪ್ರಕ್ರಿಯೆಯನ್ನು ನಡೆಸುತ್ತಿದ್ದು, ಅವುಗಳು ಈ ಕೆಳಗಿನಂತಿವೆ.

1. ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ತೆರೆಯುವುದು ಮತ್ತು ಪರಿಶೀಲಿಸಿ ಮೌಲ್ಯೀಕರಿಸುವುದು.
2. ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನಲ್ಲಿ ಅರ್ಹರಾದ ಟೆಂಡರದಾರರ ಫೈನಾನ್ಸಿಯಲ್ ಬಿಡ್ ತೆರೆಯುವುದು ಮತ್ತು ಪರಿಶೀಲಿಸಿ ಮೌಲ್ಯೀಕರಿಸುವುದು.

7.2 ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನ್ನು ಪ್ಯಾರಾ 6.5ರಲ್ಲಿ ತಿಳಿಸಿದ ಸ್ಥಳ ಹಾಗೂ ಸಮಯದಲ್ಲಿ ಹಾಜರಿರುವ ಟೆಂಡರದಾರರ ಅಥವಾ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು ಮತ್ತು ಅವರ ಹಾಜರಾತಿಯನ್ನು ಪಡೆಯಲಾಗುವುದು, ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನ್ನು ತೆರೆದ ನಡಾವಳಿಯ ಮೇಲೆ ಹಾಜರಾದ ಟೆಂಡರದಾರರ ಅಥವಾ ಅವರ ಪ್ರತಿನಿಧಿಗಳ ಸಹಿಯನ್ನು ಪಡೆಯಲಾಗುವುದು. ಸದರಿ ಪ್ರಕ್ರಿಯೆಯಲ್ಲಿ ಈ ಪ್ರಸ್ತಾವನಾ ವಿನಂತಿಯಲ್ಲಿ (Request for Proposal)

ವಿಧಿಸಿರುವ ಷರತ್ತುಗಳನ್ನು ಪೂರೈಸದ ಟೆಂಡರದಾರರನ್ನು ಟೆಂಡರ ಪ್ರಕ್ರಿಯೆಯಿಂದ ಕಡಿತಗೊಳಿಸಲಾಗುವುದು. ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನಲ್ಲಿ ಅರ್ಹರಾದ ಬಿಡ್‌ದಾರರ ಫೈನಾನ್ಸಿಯಲ್ ಬಿಡ್ ಲಕೋಟೆಯನ್ನು ನಂತರ ತೆರೆಯಲಾಗುವುದು ಹಾಗೂ ಎಲ್-1 ಬಿಡ್ಡದಾರರನ್ನು ಪ್ಯಾರಾ 13.1 ರಲ್ಲಿ ತಿಳಿಸಿರುವಂತೆ ಪರಿಗಣಿಸಲಾಗುವುದು.

7.3 ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ಗಳನ್ನು ಪರಿಶೀಲಿಸಿದ ನಂತರ, ಸದರಿ ಬಿಡ್‌ನಲ್ಲಿ ಪ್ರಸ್ತಾವನಾ ವಿನಂತಿಯಲ್ಲಿಯ ಷರತ್ತುಗಳನ್ನು ಪೂರೈಸಿದ (ಅರ್ಹ ಬಿಡ್‌ಗಳ) ಫೈನಾನ್ಸಿಯಲ್ ಬಿಡ್‌ಗಳನ್ನು ಮಾತ್ರ ತೆರೆಯಲಾಗುವುದು ಫೈನಾನ್ಸಿಯಲ್ ಬಿಡ್ ಅನ್ನು ತೆರೆಯುವ ಸಮಯವನ್ನು ಟೆಕ್ನಿಕಲ್ ಬಿಡ್ ಅನ್ನು ತೆರೆಯುವ ಸಮಯದಲ್ಲಿ ಹಾಜರಿರುವ ಬಿಡ್‌ಗಳಿಗೆ ಅಥವಾ ಅವರ ಪ್ರತಿನಿಧಿಗಳಿಗೆ ಮೌಖಿಕವಾಗಿ ತಿಳಿಸಲಾಗುವುದು.

**8 ಬಿಡ್ಡುಗಳಲ್ಲಿಯ ಸಹಿ ಕುರಿತು:**

8.1 ಮೂಲ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್‌ಗಳನ್ನು ಬೆರಳಚ್ಚು ಮಾಡಿಯೇ ಸಲ್ಲಿಸತಕ್ಕದ್ದು (ಅಥವಾ ಕಂಪ್ಯೂಟರ್ ಪ್ರಿಂಟ್ ಮೂಲಕ) ಈ ಬಿಡ್‌ಗಳ ಮೇಲೆ ಟೆಂಡರ್‌ದಾರ ಅಥವಾ ಟೆಂಡರ್‌ದಾರರು ಸಮ್ಮತಿಸಿದ ಪ್ರತಿನಿಧಿಗಳು ಪ್ರಸ್ತಾವನಾ ವಿನಂತಿಯಲ್ಲಿ (Request for Proposal) ವಿಧಿಸಿರುವ ಷರತ್ತುಗಳಿಗೆ ಬದ್ಧರಾಗಬೇಕಾದರೆ ಪ್ರಸ್ತಾವನಾ ಎಲ್ಲಾ ಪುಟಗಳ ಮೇಲೆ ಸಹಿ ಮಾಡಿರಬೇಕು.

**9 ಪ್ರಸ್ತಾವನೆಯಲ್ಲಿ ಕರಾರುಗಳ ಷರತ್ತುಗಳನ್ನು ತಿದ್ದುಪಡಿ/ರದ್ದು ಪಡಿಸುವ ಕುರಿತು:**

9.1 ಪ್ರಸ್ತಾವನಾ ವಿನಂತಿಯಲ್ಲಿ (Request for Proposal) ವಿಧಿಸಿರುವ ಷರತ್ತುಗಳನ್ನು ಯಾವುದೇ ಸಮಯದಲ್ಲಿ ಬದಲಾವಣೆ/ಮಾರ್ಪಾಡು ಮಾಡುವ ಅಥವಾ ರದ್ದು ಪಡಿಸುವ ಹಕ್ಕನ್ನು ವಾಣಿಜ್ಯ ತೆರಿಗೆ ಇಲಾಖೆಯು ಹೊಂದಿರುತ್ತದೆ. ಒಂದು ವೇಳೆ ಪ್ರಸ್ತಾವನೆಯನ್ನು ಸ್ವೀಕರಿಸಿ ಟೆಂಡರ ತೆರೆಯುವ ದಿನಾಂಕದ ಬದಲಾವಣೆ ಮಾಡುವ ಪರಿಸ್ಥಿತಿ ಬಂದಲ್ಲಿ ಅಂತಹ ವಿಷಯವನ್ನು ಈ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ಬದಲಾವಣೆ ಮಾಡಿದ ದಿನಾಂಕವನ್ನು ಪ್ರಕಟಿಸಲಾಗುವುದು.

**10 ಯಶಸ್ವಿ ಬಿಡ್ಡುದಾರನ ಇತರೆ ವಿಶೇಷ ಬಾಧ್ಯಸ್ಥಿಕೆಗಳು:**

ವಾಣಿಜ್ಯ ತೆರಿಗೆ ಇಲಾಖೆಯು ಕಾಲ ಕಾಲಕ್ಕೆ ಅವಶ್ಯವಿರುವ ಕೆಲವು ಸಾಮಾನ್ಯ ಷರತ್ತುಗಳನ್ನು ಸೇರಿಸುವ: ಕಡಿತಗೊಳಿಸುವ, ತಿದ್ದುಪಡಿ/ಮಾರ್ಪಾಡು ಮಾಡುವ ಹಕ್ಕನ್ನು ಈ ಮೂಲಕ ಕಾಯ್ದಿರಿಸಿರುತ್ತದೆ.

10.1 ವಾಣಿಜ್ಯ ತೆರಿಗೆ ಇಲಾಖೆಯ ನಿರೀಕ್ಷೆಯಂತೆ ಯಶಸ್ವಿ ಬಿಡ್ಡುದಾರನು ವಿಧಿಸಿರುವ ಎಲ್ಲಾ ಕರಾರುಗಳನ್ನು, ತಾವು ನಿರ್ವಹಿಸಬೇಕಾದ ಚಟುವಟುಕೆಗಳನ್ನು ಕಾಳಜಿಯಿಂದ ಚಾಚೂ ತಪ್ಪದೇ ಜವಾಬ್ದಾರಿಯುತವಾಗಿ ನಿರ್ವಹಿಸುವುದು.

10.2 ವಾಣಿಜ್ಯ ತೆರಿಗೆ ಇಲಾಖೆಯು ವಿಧಿಸಿರುವ ಷರತ್ತಿನಂತೆ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ, ಇಲಾಖಾ ಸಿಬ್ಬಂದಿಗಳೊಂದಿಗೆ ಒಳ್ಳೆಯ ಸಂಬಂಧವನ್ನು ಹೊಂದಿ ಅವರ ಸಹಕಾರದೊಂದಿಗೆ ಕಾರ್ಯ ನಿರ್ವಹಿಸುವುದು.

10.3 ಯಶಸ್ವಿ ಬಿಡ್‌ದಾರನ್ನು ತಾನು ಒದಗಿಸಿದ ಸಿಬ್ಬಂದಿಯ ಅಥವಾ ತನ್ನ ಕಾರ್ಯವನ್ನು ನಿರ್ವಹಿಸಲು ನೀಡಿದ ಇತರೆ ವ್ಯಕ್ತಿಯು (sub-contractor) ಕಾನೂನು ಬಾಹಿರ ಕಾರ್ಯಗಳನ್ನು ನಿರ್ವಹಿಸುವುದು ಕಂಡು ಬಂದಲ್ಲಿ ಅದರಿಂದುಂಟಾಗುವ ನಷ್ಟಗಳಿಗೆ, ಯಶಸ್ವಿ ಬಿಡ್‌ದಾರನೇ ನೇರ ಹೊಣೆಗಾರನಾಗುತ್ತಾನೆ.

10.4 ಈ ಇಲಾಖೆಯಿಂದ ನೀಡುವ ನೋಟಿಸುಗಳನ್ನು ಸ್ವೀಕರಿಸುವ ,ಅವುಗಳಿಗೆ ಉತ್ತರಿಸುವ ಕಾರ್ಯಗಳಿಗೆ, ಟೆಂಡರ್‌ದಾರು ಒದಗಿಸಿದ ಭದ್ರತಾ ಸಿಬ್ಬಂದಿಗಳ/ವಾಹನ ಚಾಲಕರ ಕಾರ್ಯ ನಿರ್ವಹಣೆಗಳನ್ನು ವೀಕ್ಷಿಸಲು ಮತ್ತು ಒಪ್ಪಂದದ ಕರಾರುಗಳ ಸುಗಮ ನಿರ್ವಹಣೆಗೆ ಒಬ್ಬ ನುರಿತ ಪ್ರತಿನಿಧಿಯನ್ನು ನಿಯೋಜಿಸುವುದು. ಹಾಗೂ ನಿಯೋಜಿತ ಪ್ರತಿನಿಧಿಯನ್ನು ಬದಲಾಯಿಸುವ ಪೂರ್ವದಲ್ಲಿ ಕಛೇರಿಯ ಪೂರ್ವ ಅನುಮತಿಯನ್ನು ಪಡೆಯುವುದು ಅವಶ್ಯಕವಾಗಿರುತ್ತದೆ. ಯಶಸ್ವಿ ಬಿಡ್ಡುದಾರನು ಒಪ್ಪಂದವು ಸಂಪೂರ್ಣವಾಗಿ ಯಶಸ್ವಿಯಾಗಲು ವೈಯಕ್ತಿಕವಾಗಿ ಜವಾಬ್ದಾರನಾಗಿರುತ್ತಾನೆ.

11. **ಬೆಲೆಗಳು ಮತ್ತು ತೆರಿಗೆಗಳು:**

11.1 ಗುತ್ತಿಗೆದಾರರು ನಮೂದಿಸಿರುವ ಬೆಲೆಗಳು ಎಲ್ಲಾ ತೆರಿಗೆಗಳಾದ ಅಂದರೆ, ಉದಾ: ವೃತ್ತಿ ತೆರಿಗೆ, ಆದಾಯ ತೆರಿಗೆ, ವಿಮಾ ಮೊಬಲಗು, ತಾಂತ್ರಿಕ ಸೇವಾ ಶುಲ್ಕ ಇತ್ಯಾದಿಗಳನ್ನು ಒಳಗೊಂಡಿರಬೇಕು ಹಾಗೂ ಸ್ಥಿರ ಮೊಬಲಗು ಆಗಿರಬೇಕು.

11.2 ಅಲ್ಲದೇ ತಾವು ನಮೂದಿಸಿದ ಬೆಲೆಗಳು ಗುತ್ತಿಗೆ ಅವಧಿ ಮುಗಿಯುವವರೆಗೆ ಸ್ಥಿರವಾಗಿರತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಬದಲಾವಣೆಗೆ ಒಳಪಡಕೂಡದು. ಹಾಗೂ ತಾವು ನಮೂದಿಸಿದ ಬೆಲೆಗಳನ್ನು ಮೂಲ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನಲ್ಲಿ ಯಾವುದೇ ರೀತಿಯಲ್ಲಿ ಕಾಣಿಸಬಾರದು.

ಒಂದು ವೇಳೆ ಕಾಣಿಸಿದಲ್ಲಿ ಮೂಲ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್‌ಗಳನ್ನು ತಿರಸ್ಕರಿಸಲಾಗುವುದು.

12. **ಬಿಡ್ಡುಗಳ ಅವಧಿ**

12.1 ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್ ಎರಡು ಬಿಡ್‌ಗಳ ಅವಧಿಯು ಈ ಕಛೇರಿಯಿಂದ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕದಿಂದ 3 ತಿಂಗಳು ಅವಧಿಯವರೆಗೆ ಮಾತ್ರ ಹೊಂದಿರುತ್ತದೆ.

13. **ಎಲ್–1 ಬಿಡ್ಡುದಾರರನ್ನು ಗುರುತಿಸಿ ಒಪ್ಪಂದನ್ನು ಮಾಡಿಕೊಳ್ಳುವ ಕುರಿತು:**

13.1 ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್ ಈ ಎರಡು ಬಿಡ್‌ಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಹಾಜರಿದ್ದ ಬಿಡ್ಡುದಾರರ ಸಮ್ಮುಖದಲ್ಲಿ ಟೆಂಡರುಗಳನ್ನು ತೆರೆದು ಅತ್ಯಂತ ಕಡಿಮೆ ಮೊತ್ತ ಸೂಚಿಸಿರುವ ಬಿಡ್ಡುದಾರರನ್ನು ಇಲಾಖೆಯು ಗುರುತಿಸಿ ಸದರಿ ಬಿಡ್ಡುದಾರರನ್ನು ಎಲ್-1 ಬಿಡ್ಡುದಾರರೆಂದು ಘೋಷಿಸಲಾಗುವುದು. ಆದ್ದರಿಂದ ಬಿಡ್ಡುದಾರರು ತಾವು ನಮೂದಿಸುವ ಬೆಲೆಗಳು ತಮ್ಮ ಸ್ವಂತ ಇಚ್ಛೆಯಿಂದ ತುಲನಾತ್ಮಕ ದರಗಳನ್ನು ನಮೂದಿಸಬೇಕಲ್ಲದೇ ಯಾವುದೇ ಕಾರಣಕ್ಕೂ ವರ್ಗಾವಣೆ ಮಾಡುವುದಾಗಲೀ, ವ್ಯವಹರಿಸುವುದಾಗಲೀ, ಮುರಿಸುವುದಾಗಲಿ ಮಾಡಲು ಅವಕಾಶವಿರುವುದಿಲ್ಲ. ಹಾಗೂ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್‌ನಲ್ಲಿ, ತಿಳಿಸಿರುವಂತೆ ಯಾವುದೇ ಕಾರಣಕ್ಕೆ ಒಳಾಂಶಗಳನ್ನು ಉಲ್ಲಂಘಿಸಿರುವುದು ಕಂಡು ಬಂದಲ್ಲಿ ಇಲಾಖೆಯು ಎಲ್-1 ಬಿಡ್ಡುದಾರರೆಂದು ಘೋಷಿಸಿರುವುದನ್ನು ರದ್ದುಪಡಿಸುವ ಹಕ್ಕನ್ನು ಹೊಂದಿರುತ್ತದೆ. ಹಾಗೂ ತದನಂತರ ಅತ್ಯಂತ ಕಡಿಮೆ ಮೊತ್ತವನ್ನು ನಮೂದಿಸಿರುವ ಬಿಡ್ಡುದಾರರನ್ನು ಗುರುತಿಸಿ ಎಲ್-2 ಬಿಡ್ಡುದಾರರೆಂದು ಘೋಷಿಸಲಾಗುವುದು. ಹಾಗೂ ಒಂದು ವೇಳೆ ಏತನ್ಮಧ್ಯೆ ಕೆಲಸದ ಆದೇಶ ಪಡೆದರೂ ಸಹಿತ ಅದನ್ನು ರದ್ದು ಪಡಿಸುವ ಹಕ್ಕು ಇಲಾಖೆಯು ಹೊಂದಿರುತ್ತದೆ. ಹಾಗೂ ಅಂತಹ ಬಿಡ್ಡುದಾರರನ್ನು ಕಪ್ಪು ಪಟ್ಟಿಗೆ ಸೇರಿಸುವುದರೊಂದಿಗೆ ಇಲಾಖೆಯು ಮುಂದೆ ಹೊರಡಿಸಬಹುದಾದ ಯಾವುದೇ ಟೆಂಡರ್ ಪ್ರಕ್ರಿಯೆಯಲ್ಲಿ ಎರಡು ವರ್ಷಗಳ ಅವಧಿಗೆ ಅನರ್ಹತೆಯನ್ನು ಹೊಂದಿರುತ್ತಾರೆ.

**14. ಇಲಾಖೆಯು ಬಿಡ್ಡನ್ನು ಅಂಗೀಕರಿಸುವ / ತಿರಸ್ಕರಿಸುವ ಅಧಿಕಾರದ ಕುರಿತು.**

14.1 ಪ್ರಸ್ತಾವನಾ ವಿನಂತಿಯಲ್ಲಿ (Request for Proposal) ವಿದಿಸಿರುವ ಷರತ್ತುಗಳನ್ನು ಹಾಗೂ ಟೆಂಡರ್ ಪ್ರಕ್ರಿಯೆ ಪ್ರಾರಂಭದ ಪೂರ್ವದಲ್ಲಿ ಅಥವಾ ನಂತರದಲ್ಲಾಗಲಿ ಟೆಂಡರ್ ಬಿಡ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆ ಇಲಾಖೆಯು ಹೊಂದಿರುತ್ತದೆ.

**15. ಒಪ್ಪಂದ ಕರಾರುಪತ್ರ ಮಾಡಿಕೊಳ್ಳುವ ಕುರಿತು.**

15.1 ಯಶಸ್ವಿ ಬಿಡ್ಡುದಾರರು ತಮಗೆ ಲಿಖಿತ ಆದೇಶ ತಲುಪಿದ ದಿನಾಂಕದಿಂದ 10 ದಿನಗಳ ಒಳಗಾಗಿ ಈ ಕಛೇರಿಗೆ ಹಾಜರಾಗಿ ರೂ.500.00 ಛಾಪಾ ಕಾಗದ ಮೇಲೆ ಕರಾರು ಒಪ್ಪಂದ ಪತ್ರವನ್ನು ಮಾಡಿಕೊಳ್ಳತಕ್ಕದು. (ಛಾಪಾ ಕಾಗದ ಖರೀದಿ ವೆಚ್ಚವನ್ನು ಏಜೆನ್ಸಿಯವರು ಭರಿಸತಕ್ಕದ್ದು)

**16. ಕಾರ್ಯನಿರ್ವಹಣೆ.**

16.1 ಸದರಿ ಒಪ್ಪಂದದ ಅವಧಿಯಲ್ಲಿ ಯಶ್ವಸಿ ಬಿಡ್ಡುದಾರರು ಭಾಗಶಃವಾಗಲಿ ಅಥವಾ ತಮ್ಮ ಪರವಾಗಿ ಇನ್ನಿತರಿಗೆ ಸದರಿ ಕಾರ್ಯವನ್ನು ವಹಿಸಿಕೊಡುವುದಾಗಲಿ ಮಾಡಬಾರದು. ಒಂದು ವೇಳೆ ಅನಿವಾರ್ಯ ಸಂದರ್ಭಗಳಲ್ಲಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರಿಂದ ಲಿಖಿತ ಅನುಮತಿ ಪಡೆಯತಕ್ಕದ್ದು.

**17. ಒಪ್ಪಂದಗಳನ್ನು ಮುರಿದುಕೊಳ್ಳುವುದು.**

17.1 ಗುತ್ತಿಗೆದಾರನು (ಯಶ್ವಸಿ ಬಿಡ್ಡದಾರನು) ಒಪ್ಪಂದದ ಕರಾರುಗಳನ್ನು ಉಲ್ಲಂಘಿಸಿದಲ್ಲಿ/ಅಥವಾ ದಿವಾಳಿಯಾದಲ್ಲಿ ಇಲಾಖೆಯು ಅವರಿಗೆ ಸೂಚನಾ ಪತ್ರವನ್ನು ನೀಡುವುದರೊಂದಿಗೆ ಒಪ್ಪಂದವನ್ನು ಸಂಪೂರ್ಣವಾಗಿಯಾಗಲೀ ಅಥವಾ ಭಾಗಶಃವಾಗಲಿ ಮುರಿದುಕೊಳ್ಳಬಹುದಾಗಿರುತ್ತದೆ. ಹಾಗೂ ಗುತ್ತಿಗೆದಾರನಿಗೆ ಕೆಲಸದ ಆದೇಶ ತಲಿಪಿದ ದಿನದಿಂದ ನಿಗದಿಪಡಿಸಿದ ಅವಧಿಯೊಳಗೆ ಭದ್ರತಾ ಸಿಬ್ಬಂದಿಗಳನ್ನು ಕಡ್ಡಾಯವಾಗಿ ನೇಮಿಸಬೇಕು. ಒಂದು ವೇಳೆ ಭದ್ರತಾ ಸಿಬ್ಬಂದಿ / ವಾಹನ ಚಾಲಕರುಗಳನ್ನು ನೇಮಿಸದೇ ಇದ್ದಲ್ಲಿ ಯಾವುದೇ ಕಾರಣಕ್ಕೂ ಹೆಚ್ಚುವರಿ ಅವಧಿಯನ್ನು ನೀಡಲಾಗುವುದಿಲ್ಲ. ಗುತ್ತಿಗೆದಾರನು ಒಂದುವೇಳೆ ಕರಾರು ಒಪ್ಪಂದ ಪತ್ರದ ಪ್ರಕಾರ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಇಲಾಖೆಯು ಮುಂದಿನ ಅವಧಿಗೆ ಬೇರೆ ಇನ್ನೊಬ್ಬ ಗುತ್ತಿಗೆದಾರನಿಂದ ಸೇವೆಯನ್ನು ಪಡೆಯುವ ಹಕ್ಕನ್ನು ಹೊಂದಿದ್ದು, ತದನಂತರದ ಅವಧಿಗೆ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ.

**18. ಗುತ್ತಿಗೆ ಮೊತ್ತವನ್ನು ಪಾವತಿ ಮಾಡುವ ಕರಾರುಗಳು.**

18.1 ಗುತ್ತಿಗೆದಾರನು ತಾನು ಪೂರೈಸಿದ ಭದ್ರತಾ ಸಿಬ್ಬಂದಿ / ವಾಹನ ಚಾಲಕರ ಸೇವೆಗೆ ಪ್ರತಿ ತಿಂಗಳು ಗುತ್ತಿಗೆ ಮೊತ್ತವನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

ಎ) ಪ್ರತಿ ತಿಂಗಳ ಅಂತ್ಯಕ್ಕೆ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ಮೌಲ್ಯವರ್ಧಿತ ತೆರಿಗೆ ವಿಭಾಗ, ದೇವರಾಜ್ ಅರಸ್ ಬಡಾವಣೆ, 'ಎ' ಬ್ಲಾಕ್, ದಾವಣಗೆರೆ ಇವರ ಕಛೇರಿಗೆ ತನ್ನ ಬಿಲ್ಲನ್ನು ಸಲ್ಲಿಸತಕ್ಕದ್ದು.

ಬಿ) ಬಿಲ್ಲು ಸಲ್ಲಿಸಿದ ದಿನಾಂಕದಿಂದ 15 ದಿನಗಳ ಒಳಗಾಗಿ ಗೊತ್ತುಪಡಿಸಿದ ಗುತ್ತಿಗೆ ಮೊತ್ತವನ್ನು ಸಂದಾಯಮಾಡಲಾಗುವುದು.

**19. ವ್ಯಾಜ್ಯಗಳ ಪರಿಹಾರ ಕುರಿತು.**

19.1 ಒಂದುವೇಳೆ ಇಲಾಖೆ ಹಾಗೂ ಗುತ್ತಿಗೆದಾರರ ಮಧ್ಯ ಗುತ್ತಿಗೆ ವ್ಯವಹಾರಕ್ಕೆ ಸಂಬಂಧಿಸಿದಂತೆ ಹಾಗೂ ಕರಾರು ಒಪ್ಪಂದ ಪತ್ರದ ಒಳಾಂಶಗಳಿಗೆ ಸಂಬಂಧಿಸಿದಂತೆ ವ್ಯಾಜ್ಯಗಳು/ವಿವಾದಗಳು ಉದ್ಭವಿಸಿದಲ್ಲಿ ಅವುಗಳನ್ನು ಯಾವುದೇ ದುರದ್ದೇಶವಿಲ್ಲದೇ ಒಟ್ಟಾಭಿಪ್ರಾಯದಲ್ಲಿ ಇಲಾಖೆಯು ನಿಗಧಿಪಡಿಸಿದ ಚೌಕಟ್ಟಿನೊಳಗೆ ಮಾತುಕತೆ ಮೂಲಕವಾಗಲೀ ಅಥವಾ ಇನ್ನಾವುದೇ ಯೋಗ್ಯವೆನಿಸಿದ ಪರಿಹಾರದ ಮೂಲಕವಾಗಲಿ ಬಗೆಹರಿಸಿಕೊಳ್ಳಲು ಪ್ರಯತ್ನಿಸಲಾಗುವುದು. ಅದಾಗ್ಯೂ ಸಹಿತ ಸದರಿ ವ್ಯಾಜ್ಯಗಳು ಪರಿಹರಿಸಲು ಸಾಧ್ಯವಾಗದೇ ಇದ್ದ ಪಕ್ಷದಲ್ಲಿ ಗುತ್ತಿಗೆದಾರರ ಪರವಾಗಿ ಹಾಗೂ ಇಲಾಖೆಯ ಪರವಾಗಿ ಮಧ್ಯಸ್ಥ ಪಾಧಿಕಾರವನ್ನು ರಚಿಸಿ, ಅದರಲ್ಲಿ ಗುತ್ತಿಗೆದಾರರ ಪರವಾಗಿ ಒಬ್ಬ ಮಧ್ಯಸ್ಥಗಾರರನ್ನು ಹಾಗೂ ಇಲಾಖೆಯ ಪರವಾಗಿ ಒಬ್ಬ ಮಧ್ಯಸ್ಥಗಾರನನ್ನು ಸೂಚಿಸಲಾಗುವುದು ಹಾಗೂ ಮೇಲ್ಕಾಣಿಸಿದ ಇಬ್ಬರೂ ಮಧ್ಯಸ್ಥರೂ ಸೇರಿ, ಇನ್ನೊಬ್ಬ ಮೂರನೇ ಮಧ್ಯಸ್ಥಗಾರರನ್ನು ಸೂಚಿಸಿ ಮಧ್ಯಸ್ಥ ಪ್ರಾಧಿಕಾರವು ನೀಡುವ ಮಧ್ಯಸ್ಥ ಐತೀರ್ಪಿಗೆ ಒಳಪಟ್ಟು ಮಧ್ಯಸ್ಥ ಒಪ್ಪಂದವನ್ನು ಮಾಡಿಕೊಂಡು ವ್ಯಾಜ್ಯಗಳನ್ನು ಪರಿಹರಿಸಲು ಪ್ರಯತ್ನಿಸಲಾಗುವುದು. ಇಷ್ಟೆಲ್ಲ ಪ್ರಯತ್ನಿಸಲಾಗಿ ವ್ಯಾಜ್ಯಗಳನ್ನು ಪರಿಹರಿಸಲು ಸಾಧ್ಯವಾಗದೇ ಇದ್ದಲ್ಲಿ ಮಧ್ಯಸ್ಥಿಕೆ ಅಧಿನಿಯಮ 1996ರ ಪ್ರಕಾರ ಮಧ್ಯಸ್ಥ ಐತೀರ್ಪಿನ ಪ್ರಕಾರ ಮಧ್ಯಸ್ಥ ಪ್ರಾಧಿಕಾರವು ಸೂಚಿಸಿದಂತೆ ಮಧ್ಯಸ್ಥಿಕೆ ಖಂಡಗಳನ್ವಯ ಯಾವುದೇ ಸಮಯದಲ್ಲಿ, ಯಾವುದೇ ರೂಪದಲ್ಲಿ ಅವರು ಸೂಚಿಸುವ ಖಂಡಗಳನ್ವಯ ತಗುಲಿದ ಅನುಷಂಗಿಕ/ಪ್ರಾಸಂಗಿಕ ವೆಚ್ಚಗಳನ್ನು ಸಮನಾಗಿ ಭರಿಸುವುದರೊಂದಿಗೆ ವ್ಯಾಜ್ಯಗಳನ್ನು/ವಿವಾದಗಳನ್ನು ಪರಿಹರಿಸಲು ಪ್ರಯತ್ನಿಸಲಾಗುವುದು.

ಆದಾಗ್ಯೂ ಸಹಿತ ವಿವಾದವು/ವ್ಯಾಜ್ಯಗಳು ಪರಿಹಾರವಾಗದೇ ಹಾಗೇ ಉಳಿದುಕೊಂಡಲ್ಲಿ ತತ್ಪರಿಣಾಮವಾದ ಪರಿಹಾರವನ್ನು ಪಡೆದುಕೊಳ್ಳಲು ಅಂತಿಮವಾಗಿ ಸಿವಿಲ್ ನ್ಯಾಯಾಲಯ, ದಾವಣಗೆರೆ, ಇವರು ನೀಡುವ ಆದೇಶಕ್ಕೆ ಒಳಪಟ್ಟು ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳುವುದಾಗಿರುತ್ತದೆ.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
(ಆಡಳಿತ), ವಾ.ತೆ.ವಿ., ದಾವಣಗೆರೆ.

# ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್

## ಅನುಬಂಧ-1

1) ಈ ಅಧ್ಯಾಯದಲ್ಲಿ ಕಾಣಿಸಿದಂತೆ ಈ ಕೆಳಕಂಡ ಟೇಬಲ್‌ದಲ್ಲಿ ಕಾಣಿಸಿದ ಅಂಶಗಳು ಟೆಂಡರ್‌ಗೆ ಸಂಬಂಧಿಸಿದಂತೆ ಪೂರಕ ಅಂಶಗಳಾಗಿರುತ್ತವೆ. ಅದ್ದರಿಂದ ಎಲ್ಲ ಗುತ್ತಿಗೆದಾರರು ಈ ಕೆಳಕಂಡ ನಮೂನೆಯಲ್ಲಿ ಕಾಣಿಸಿದ ಎಲ್ಲ ಕಾಲಂಗಳನ್ನು ಕಡ್ಡಾಯವಾಗಿ /ಭರ್ತಿ ಮಾಡಬೇಕು. ತಪ್ಪಿದಲ್ಲಿ ಟೆಂಡರುಗಳ ಪ್ರಾಥಮಿಕ ಪರಿಶೀಲನಾ ಸಮಯದಲ್ಲಿ ಟೆಂಡರಗೆ ಪೂಕರವಾದ ಅಂಶಗಳು ಇಲ್ಲವೆಂದು ಪರಿಗಣಿಸಿ ತಿರಸ್ಕರಿಸಲಾಗುವುದು.

2) ಬಿಡ್ಡುದಾರರು ಈ ಕೆಳಕಂಡ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದಾಗಿರುತ್ತದೆ.

ಎ) ಬಿಡ್ಡುದಾರರು ಕಳೆದ 3 ವರ್ಷಗಳಿಂದ ಕರ್ನಾಟಕದಲ್ಲಿ ಭದ್ರತಾ ಸಿಬ್ಬಂದಿ/ವಾಹನ ಚಾಲಕರನ್ನು ಪೂರೈಸಿದ ಬಗ್ಗೆ ದಾಖಲೆ ಸಲ್ಲಿಸುವುದು.

ಬಿ) ಬಿಡ್ಡುದಾರರು ತಮ್ಮ ಕೇಂದ್ರ ಕಛೇರಿಯನ್ನು ಕರ್ನಾಟಕದಲ್ಲಿ ಹೊಂದಿರುವ ಬಗ್ಗೆ ದಾಖಲೆ ಸಲ್ಲಿಸುವುದು.

ಸಿ) ಬಿಡ್ಡುದಾರರು ಕಳೆದ 3 ವರ್ಷಗಳಲ್ಲಿ ರಾಜ್ಯ/ಕೇಂದ್ರ ಸರ್ಕಾರದ/ಅಂಗೀಕೃತ/ಮಾನ್ಯತೆ ಪಡೆದ ಇಲಾಖೆ/ಸಂಸ್ಥೆಗಳಿಗೆ ಭದ್ರತಾ ಸಿಬ್ಬಂದಿ/ವಾಹನ ಚಾಲಕರನ್ನು ಪೂರೈಸಲಾಗಿದೆ ಎಂಬುದರ ಬಗ್ಗೆ ದಾಖಲೆ ಸಲ್ಲಿಸುವುದು. ಹಾಗೂ ಚಾಲ್ತಿ ಆರ್ಥಿಕ ವರ್ಷದಲ್ಲಿ ಯಾವ ಯಾವ ಇಲಾಖೆ/ಸಂಸ್ಥೆಗಳಿಗೆ ಭದ್ರತಾ ಸಿಬ್ಬಂದಿ / ವಾಹನ ಚಾಲಕರನ್ನು ಪೂರೈಸಲಾಗಿದೆ ಎಂಬುದರ ಬಗ್ಗೆ ದಾಖಲೆ ಮತ್ತು ಕೆಲಸದ ಆದೇಶ ಪಡೆದ ಬಗ್ಗೆ ದಾಖಲೆ ಸಲ್ಲಿಸುವುದು.

ಡಿ) ಕಾರ್ಮಿಕರ ಇಲಾಖೆ, ಇ.ಎಸ್.ಐ., ಇ.ಫಿ.ಎಫ್., ಸೇವಾ ತೆರಿಗೆ ಹಾಗೂ ಪೊಲೀಸ್ ಇಲಾಖೆಯಲ್ಲಿ ಬಿಡ್ಡುದಾರರನು ನೋಂದಣಿಯಾಗಿರುವ ಬಗ್ಗೆ ದೃಢೀಕೃತ ನೋಂದಣಿ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
(ಆಡಳಿತ), ಮೌ.ತೆ.ವಿ., ದಾವಣಗೆರೆ.

# ನಮೂನೆ

## ಬಿಡ್ಡುದಾರರು ಈ ಕೆಳಕಂಡ ಸಾಮಾನ್ಯ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು:-

| ಕ್ರ.ಸಂ. | | ವಿವರಗಳು | |
|---|---|---|---|
| 1 | | ಸಂಸ್ಥೆಯ ಹೆಸರು ಮತ್ತು ಪೂರ್ಣ ವಿಳಾಸ | |
| 2 | | ಗುತ್ತಿಗೆದಾರರು ವೈಯಕ್ತಿಕ ಸಂಸ್ಥೆಯಾದಲ್ಲಿ ಮಾಲೀಕರ ಹೆಸರು/ಪಾಲುದಾರಿ ಸಂಸ್ಥೆಯಾಗಿದ್ದಲ್ಲಿ ಪಾಲುದಾರರ ಹೆಸರುಗಳು/ಕಂಪನಿ-ಸಂಸ್ಥೆಯಾಗಿದ್ದಲ್ಲಿ ಪ್ರೆಸಿಡೆಂಟ್/ಕಾರ್ಯನಿರ್ವಾಹಕ ನಿರ್ದೇಶಕರ ಹೆಸರು: | |
| | 1 | ಮಾಲೀಕರ/ಪಾಲುದಾರರು/ಪ್ರೆಸಿಡೆಂಟ್/ಕಾರ್ಯನಿರ್ವಾಹಕ ನಿರ್ದೇಶಕರ ಹೆಸರು: | |
| | 2 | ದೂರವಾಣಿ ಸಂಖ್ಯೆ : | |
| | 3 | ಫ್ಯಾಕ್ಸ್ ಸಂಖ್ಯೆ | |
| | 4 | ಈ-ಮೇಲ್ ಐ.ಡಿ. | |
| 3 | | ವ್ಯವಹಾರದ ಸ್ವರೂಪ | |
| | 1 | ಮಾಲೀಕತ್ವ | |
| | 2 | ಪಾಲುಗಾರಿಕೆ ಸಂಸ್ಥೆ | |
| | 3 | ಕಂಪನಿ (ಕಂಪನಿಯಾಗಿದ್ದಲ್ಲಿ ನೋಂದಾಣಿ ಸಂಖ್ಯೆ) | |
| | 4 | ಸಾರ್ವಜನಿಕ ಕಂಪನಿ | |
| 4 | | ವ್ಯವಹಾರ ಪ್ರಾರಂಭಿಸಿದ ದಿನಾಂಕ | |
| 5 | | ಪಾಲುದಾರಿಕೆ ಸಂಸ್ಥೆಯಾಗಿದ್ದಲ್ಲಿ ಎಲ್ಲಾ ಪಾಲುದಾರರ/ ಕಂಪನಿಯಾಗಿದ್ದಲ್ಲಿ ಎಲ್ಲಾ ನಿರ್ದೇಶಕರ<br>ಹೆಸರು:<br>ದೂರವಾಣಿ ನಂ:<br>ಸೆಲ್ ನಂ:<br>ಈ-ಮೇಲ್ ಐ.ಡಿ. | |

| | | |
|---|---|---|
| 6 | ಈ.ಎಮ್.ಡಿ. ಮೊತ್ತವನ್ನು (ರೂ. 30000/-) ಡಿ.ಡಿ. ಮುಖಾಂತರ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ), ಮೌ.ತೆ.ವಿ., ದಾವಣಗೆರೆ ಇವರ ಹೆಸರಿನಲ್ಲಿ ನೀಡಬೇಕು.<br>ಬ್ಯಾಂಕಿನ ಹೆಸರು/ಡಿ.ಡಿ. ನಂಬರು ಮತ್ತು ದಿನಾಂಕ: | ರೂ. |
| 7 | ಬಿಡ್‌ದಾರನ ಪ್ರತಿನಿಧಿಯ ವಿವರ:<br>ಹೆಸರು & ವಿಳಾಸ:<br>ದೂರವಾಣಿ & ಮೊಬೈಲ್ ಸಂಖ್ಯೆ:<br>ಇಮೇಲ್ ಐ.ಡಿ: | |
| 8 | ಭದ್ರತಾ ಸಿಬ್ಬಂದಿ / ವಾಹನ ಚಾಲಕರ ಪೂರೈಕೆಯ ಅನುಭವದ ವಿವರ ಕುರಿತು ಮಾಹಿತಿ / ಸರಕಾರಿ ಕಛೇರಿಗಳಿಗೆ ಪೂರೈಕೆ ಮಾಡಿದ ಮಾಹಿತಿ / ಸಾರ್ವಜನಿಕ ಸಂಸ್ಥೆಗಳಿಗೆ ಪೂರೈಕೆ ಮಾಡಿದ ವಿವರ:<br>ಪೂರೈಕೆ ಮಾಡಿದ ಕಛೇರಿಗಳ ವಿಳಾಸ:<br>ದೂರವಾಣಿ ಸಂಖ್ಯೆ: | |

ಸ್ಥಳ:

ದಿನಾಂಕ:

ಅಧಿಕೃತ ಪ್ರತಿನಿಧಿಯ ಸಹಿ

ಹೆಸರು:

ಪದನಾಮ:

ಮೊಹರು:

ಮತ್ತ್ಯಾವುದಾದರು ಅನುಬಂಧಗಳು ಇದ್ದಲ್ಲಿ.

# ಅನುಬಂಧ – 3

## ಭದ್ರತಾ ಸಿಬ್ಬಂದಿಗಳು ಕಾರ್ಯ ನಿರ್ವಹಿಸಬೇಕಾದ ಸ್ಥಳ

| ಕ್ರ. ಸಂ. | ಭದ್ರತಾ ಸಿಬ್ಬಂದಿ / ವಾಹನ ಚಾಲಕರು ಕಾರ್ಯನಿರ್ವಹಿಸಬೇಕಾದ ಸ್ಥಳ. | ಕಟ್ಟಡ ಮೇಲ್ವಿಚಾರಣಾ ಕಛೇರಿಯ ದೂರವಾಣಿ ಸಂಖ್ಯೆ: |
|---|---|---|
| 1 | ವಾಣಿಜ್ಯ ತೆರಿಗೆ ಭವನ, ದೇವರಾಜ್ ಅರಸ್ ಬಡಾವಣೆ, 'ಎ' ಬ್ಲಾಕ್, ದಾವಣಗೆರೆ. | 08192-231359 |

ಭದ್ರತಾ ಸಿಬ್ಬಂದಿ ಪೂರೈಕೆದಾರರ ಸಹಿ